# ಸ್ವರೂಪ ಬದಲಾಗುವ ಪ್ರಕ್ರಿಯೆ

ಬೆಂಗಳೂರಿನ ಶೇಷಾದ್ರಿಪುರಂನ ಪ್ರತಿಷ್ಠಿತ ಫೋಟೊ ಸ್ಟುಡಿಯೊ. ಅಲ್ಲಿ ಮೂವರು ಸಹನಟರು ನಿಂತಿದ್ದರು. ಅವರಲ್ಲಿ ಇಬ್ಬರು ಕಿರುತೆರೆಯಲ್ಲಿ ಅವಕಾಶ ಗಿಟ್ಟಿಸಿಕೊಂಡು, ಸಿನಿಮಾ ಲೋಕಕ್ಕೆ ತಲಾ ಒಂದೊಂದು ಕಾಲನ್ನು ಇಟ್ಟು, ನಾಯಕರಾಗುವ ಕನಸು ಕಾಣುತ್ತಿದ್ದರು. ಇನ್ನೊಬ್ಬರಿಗೆ ಖಳನಾಯಕನಾಗುವ ಬಯಕೆ. ಹಸುವಿನ ಹಾಲು ಕರೆಯುವ ಕಸುಬು ತನ್ನನ್ನು ಕಾಪಾಡುತ್ತಿದೆ ಎಂದಿದ್ದ ಈ ಖಳನಾಗುವ ಬಯಕೆಯ ನಟನ ಮುಖ ಹಿಂದಿಯ ಪ್ರಸಿದ್ಧ ನಟರ ಚಹರೆಯನ್ನು ಹೋಲುತ್ತಿತ್ತು. ಹಾಗೆ ಹೇಳಿ, ಜಾಕ್ ಹಾಕಿ ಕೆಲವರು ಎಂತೆಂಥದೋ ತಗಡು ಪಾತ್ರಗಳನ್ನು ಕೊಟ್ಟಿದ್ದಕ್ಕೆ ಆತನಲ್ಲಿ ಬೇಸರವೂ ಇತ್ತು. ಮೂರೂ ಜನರು ತಮಗೆ ಅವಕಾಶ ಸಿಕ್ಕಿದ್ದ ಯಾವುದೋ ಸಿನಿಮಾದ ನಾಯಕಿಯ ಸ್ಟಿಲ್‌ಗಳನ್ನು ಪಡೆದುಕೊಂಡು ಹೋಗಲು ಆ ಸ್ಟುಡಿಯೊಗೆ ಬಂದಿದ್ದದ್ದು. ಆ ಫೋಟೊಗಳನ್ನು ಹಿಡಿದು ನಿಂತ ಅವರು ನಾಯಕಿಯ ದೇಹ ದಪ್ಪಗಾಗಿರುವುದನ್ನು ಕಣ್ಣಿನಲ್ಲೇ ಬಣ್ಣಿಸುತ್ತಾ ತಮಾಷೆ ಮಾಡಿದರು. ಒಬ್ಬ ನಟನಂತೂ ತಾನು ಹುಡುಗಿ ಆಗಿದ್ದಿದ್ದರೆ ಇಷ್ಟು ಹೊತ್ತಿಗೆ ಸಲೀಸಾಗಿ ಹೀರೋಯಿನ್ ಆಗಬಹುದಿತ್ತು ಎಂದು ಆ ನಾಯಕಿಯ ಫೋಟೊ ನೋಡುತ್ತಾ ಹೊಟ್ಟೆಕಿಚ್ಚು ಪಟ್ಟರು.

ಸಣ್ಣದೊಂದು ಕಾರಿನಲ್ಲಿ ಹೊರಟ ಮೂವರೂ ಗಾಂಧಿನಗರದ ಜನಪ್ರಿಯ ಹೋಟೆಲ್ ತಲುಪಿದರು. ಅಲ್ಲಿ ಬಾಳೆಎಲೆಯ ಮೇಲೆ ಬಾಡೂಟ. ಅವರವರ ಇಷ್ಟದ ಮಾಂಸದ ತುಂಡುಗಳನ್ನು ಕಡಿಯುತ್ತಲೇ ಸಿನಿಮಾ ಕನಸುಗಳನ್ನು ಪರಸ್ಪರ ಹಂಚಿಕೊಂಡರು. ಟೀವಿ ನಿರೂಪಣೆ, ಸಿನಿಮಾದ ಸಣ್ಣ ಪುಟ್ಟ ಪಾತ್ರಗಳಿಂದ ಹೊಟ್ಟೆ ತುಂಬಿಸಿಕೊಳ್ಳುವುದೂ ತುಂಬಾ ಕಷ್ಟವಾಗಿದೆ ಎಂದು ನೊಂದುಕೊಳ್ಳುತ್ತಾ ಅವರೆಲ್ಲಾ ಅನುಭವಗಳನ್ನು ಹಂಚಿಕೊಂಡರು. ವಾಪಸ್ ಹೊರಡುವಾಗ ಕಾರನ್ನು ಅಲ್ಲಾಡಿಸಿ, ಅದರೊಳಗೆ ಪೆಟ್ರೋಲ್ ಎಷ್ಟಿದೆ ಎನ್ನುವುದನ್ನು ಖಚಿತಪಡಿಸಿಕೊಂಡ ಒಬ್ಬ ನಟ ಬರಬೇಕಾದ ಹಣದ ಕಡೆಗೆ ಮಾತನ್ನು ಹೊರಳಿಸಿದರು. ಎಲ್ಲರೂ ತಮ್ಮ ತಮ್ಮ ಬಾಲ್ಯ, ಮನೆಯಲ್ಲಿ ಬೈಯಿಸಿಕೊಂಡಿದ್ದು, ಸ್ಮಶಾನಕ್ಕೆ ಹೋಗಿ ಕುಳಿತದ್ದು, ಪರ್ಮಿಷನ್ ಇಲ್ಲದೆ ವೇದಿಕೆ ಏರಿದ್ದು, ಯಾರ್‍ಯಾರ ಬಳಿಯೋ ಅವಕಾಶಕ್ಕಾಗಿ ಕೈಚಾಚಿದ್ದು ಹೀಗೆ ಎಲ್ಲವನ್ನೂ ಹೇಳಿಕೊಂಡರು.

ಈ ಘಟನೆ ನಡೆದು ಹನ್ನೊಂದು ವರ್ಷಗಳು ಉರುಳಿವೆ. ಸಾಕಷ್ಟು ಸಿನಿಮಾ ನೀರು ಹರಿದಿದೆ. ಆ ಮೂವರಲ್ಲಿ ಒಬ್ಬ ಈಗ ಬಂಗಾರದ ಸ್ಟಾರ್. ಪತ್ನಿ ಅವರ ಹುಟ್ಟುಹಬ್ಬಕ್ಕೆ ಕೋಟಿ ಬೆಲೆ ಮೀರಿದ ಕಾರನ್ನು ಉಡುಗೊರೆಯಾಗಿ ಕೊಟ್ಟದ್ದು ಸುದ್ದಿಯಾಯಿತು. ಇನ್ನೊಬ್ಬರು ಲಯ ಕಂಡುಕೊಳ್ಳಲು ಹೆಣಗುತ್ತಿದ್ದರೂ ತಮ್ಮದೇ ಅಭಿಮಾನಿ ವೃಂದವನ್ನು ಪೋಷಿಸುತ್ತಾ, ತಮ್ಮ ಹೆಸರಿಗೂ ಒಂದು ಸ್ಟಾರ್ ಎಂಬ ಗುಣವಿಶೇಷಣ ಅಂಟಿಸಿಕೊಂಡಿದ್ದಾರೆ. ಹಸುವಿನ ಹಾಲು ನೆಚ್ಚಿಕೊಂಡಿದ್ದವರು ಅಭಿನಯ ಲೋಕದಲ್ಲಿ ಆರಕ್ಕೇರಲಿಲ್ಲ, ಮೂರಕ್ಕೆ ಇಳಿಯಲಿಲ್ಲ. ಜನ ಗುರುತು ಹಚ್ಚುವಷ್ಟು ಅವಕಾಶಗಳು ಸಿಕ್ಕವಷ್ಟೆ.

ಈಗ ಆ ಸ್ಟುಡಿಯೊ ಅದೇ ಸ್ವರೂಪದಲ್ಲಿ ಇಲ್ಲ. ನಟಿಯ ಫೋಟೊ ಮೇಲೆ ಕೈಯಾಡಿಸುತ್ತಾ ಆಡಿಕೊಂಡ ಆ ನಟರ ಸ್ವರೂಪವೂ ಬದಲಾಗಿದೆ. ಗಾಂಧಿನಗರದ ಮಾಂಸಾಹಾರದ ಹೋಟೆಲ್‌ನ ಬಾಣಸಿಗ ಮಾತ್ರ ಅದೇ ಹದದಲ್ಲಿ ಬಿರಿಯಾನಿ ಮಾಡುತ್ತಿದ್ದು, ಅದನ್ನು ತಿನ್ನುತ್ತಾ ಸಿನಿಮಾ ಸಂವಾದ ನಡೆಸುವವರು ಅಲ್ಲಿಗೆ ಬಂದು ಹೋಗುತ್ತಲಿದ್ದಾರೆ.

**● ವಿಶಾಖ ಎನ್.**

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68